

ಒಮ್ಮೆ ಬುದ್ಧನಿಗೆ, ಸತ್ತು ಹೋಗಿರುವ ತನ್ನ ಮಗುವನ್ನು ಬದುಕಿಸಿಕೊಡು ಎಂದು ಗೌತಮಿ ಕೇಳಿದಳಂತೆ. ಆಗ ಬುದ್ಧ, ಸಾವಿಲ್ಲದವರ ಮನೆಯಿಂದ ಒಂದು ಹಿಡಿ ಸಾಸಿವೆ ತಂದುಕೊಡು, ನಾನು ನಿನ್ನ ಮಗುವನ್ನು ಬದುಕಿಸುತ್ತೇನೆ ಎಂದನಂತೆ. ಅದೇನು ಮಹಾ ಎಂದ ಗೌತಮಿ, ಮನೆಗೆ ಮನೆಗೆ ಹೋಗಿ ಕೇಳಿದಳು. ಒಂದು ಹಿಡಿಯೇನು, ಬಳ್ಳದಷ್ಟು ಬೇಕಾದರೂ ಕೊಡಲು ಅವರು ಸಿದ್ಧರಿದ್ದರು, ಆದರೆ ಸಾವಿಲ್ಲದ ಮನೆ ಯಾವುದಿದೆ? ಆಗ ಗೌತಮಿಗೂ ಬುದ್ಧನ ಮಾತು ಅರ್ಥವಾಯಿತು. ಈಗ ಏನಾದರೂ ಈ ಘಟನೆ ನಡೆದಿದ್ದರೆ, ಬುದ್ಧ ಗೌತಮಿಗೆ ಏನು ಹೇಳುತ್ತಿದ್ದ ಗೊತ್ತೇ? 'ಟಿವಿ ಇಲ್ಲದ ಮನೆಯಿಂದ ಒಂದು ಹಿಡಿ ಸಾಸಿವೆ ತಂದುಕೊಡು' ಎಂದು ಕೇಳುತ್ತಿದ್ದ. ಗೌತಮಿ ಈಗಲೂ ಸೋಲುತ್ತಿದ್ದಳು!

ನಿಜ, ಸಾವಿಲ್ಲದ ಮನೆಯಿಲ್ಲ ಎನ್ನುವ ಹಾಗೆಯೇ ಇವತ್ತು ಟಿವಿ ಇಲ್ಲದ ಮನೆಯಿಲ್ಲ. ಇದು, ವಿಚಿತ್ರ ಆದರೂ ಸತ್ಯ, ಆದರೆ ವಿಚಿತ್ರವಲ್ಲದ ಇನ್ನೊಂದು ಸತ್ಯ ಎಂದರೆ, ನಮ್ಮ ಮನೆಯಲ್ಲಿ ಈಗ ಟಿವಿ ಇಲ್ಲ. ನಿಜವಾಗಿಯೂ ಇಲ್ಲ. ಬೇಕಾದರೆ ಬಂದು ನೋಡಿ. ಟಿವಿ ಮತ್ತು ನನ್ನ ಸಂಬಂಧದ ಬಗ್ಗೆ ಇಲ್ಲಿದೆ ಒಂದು ಅವಲೋಕನ.

## ಬಾಲ್ಯ

ಟಿವಿ ಮತ್ತು ನನ್ನ ಸಂಬಂಧದ ಈ ಕಥೆಯಲ್ಲಿ ಮೂರು ಅಧ್ಯಾಯಗಳು. ಬಾಲ್ಯ, ದಾಂಪತ್ಯ ಮತ್ತು ತಾಯ್ತನ. ನಾವು ಚಿಕ್ಕವರಿರುವಾಗ ಟಿವಿ ಎಂದರೆ ದೂರದರ್ಶನ ಮಾತ್ರ. ಅದೂ ಬೆಳಿಗ್ಗೆ ಮತ್ತು ಸಂಜೆ ಮಾತ್ರ ಪ್ರಸಾರ.